**All India Radio: Bangalore**
**National Bulletin In Kannada**
**10.06.2025 1.10 p.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**10.06.2025 1.10 p.m.**

**<><><><>**

ಮುಖ್ಯಾಂಶಗಳು

- ಕಳೆದ ೧೧ ವರ್ಷಗಳಲ್ಲಿ ರಕ್ಷಣಾ ಉತ್ಪಾದನೆಯಲ್ಲಿ ಸ್ವಾವಲಂಬನೆಯತ್ತ ದಿಟ್ಟ ಹೆಜ್ಜೆ - ಪ್ರಧಾನಿ ನರೇಂದ್ರ ಮೋದಿ
- ಸ್ವಿಜರ್‌ಲ್ಯಾಂಡ್‌ನಲ್ಲಿಂದು ಭಾರತ-ಐರೋಪ್ಯ ಮುಕ್ತ ವ್ಯಾಪಾರ ಸಂಘದೊಂದಿಗೆ ಒಪ್ಪಂದ ಕುರಿತು ಕೇಂದ್ರ ಸಚಿವ ಪಿಯೂಷ್ ಗೊಯಲ್ ಚರ್ಚೆ
- ಸಿಂಗಾಪುರ್ ಎಂವಿ ವಾನ್ ಹೈ ೫೦೩ ಹಡಗು ಮುಳುಗಡೆ; ೧೮ ಜನರನ್ನು ರಕ್ಷಿಸಿದ ಭಾರತೀಯ ನೌಕಾಪಡೆ
- ತಾಷ್ಕೆಂಟ್‌ನಲ್ಲಿಂದು ೧೯-ವರ್ಷದೊಳಗಿನವರ ವಾಲಿಬಾಲ್ ಚಾಂಪಿಯನ್ ಷಿಪ್ ಕಾವಾ ೨೦೨೫ ಆರಂಭ: ಭಾರತ-ಇರಾನ್ ಸೆಣಸು

<><><><>

ಕಳೆದ ೧೧ ವರ್ಷಗಳಲ್ಲಿ ರಕ್ಷಣಾ ಕ್ಷೇತ್ರ ಪ್ರಮುಖ ಬದಲಾವಣೆಗಳಿಗೆ ಸಾಕ್ಷಿಯಾಗಿದ್ದು, ವಿಶೇಷವಾಗಿ ಆಧುನೀಕರಣ ಮತ್ತು ರಕ್ಷಣಾ ಉತ್ಪಾದನೆಯಲ್ಲಿ ಸ್ವಾವಲಂಬಿಯಾಗುವತ್ತ ಗಮನಹರಿಸಲಾಗಿದೆ ಎಂದು ಸಾಮಾಜಿಕ ಮಾಧ್ಯಮದಲ್ಲಿ ತಿಳಿಸಿರುವ ಪ್ರಧಾನಿ ನರೇಂದ್ರ ಮೋದಿ, ಭಾರತವನ್ನು ಶಕ್ತಿಶಾಲಿ ರಾಷ್ಟ್ರವಾಗಿಸಲು ಸಮಸ್ತ ಜನತೆ ಏಕತಾಭಾವದಿಂದ ಕೊಡುಗೆ ನೀಡುತ್ತಿರುವ ಕುರಿತು ಹರ್ಷ ವ್ಯಕ್ತಪಡಿಸಿದ್ದಾರೆ.

<><><><>

ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಕಳೆದ ಹನ್ನೊಂದು ವರ್ಷಗಳಲ್ಲಿ ಭಾರತದ ರಕ್ಷಣಾ ವಲಯ ಐತಿಹಾಸಿಕ ಬದಲಾವಣೆಗೆ ಸಾಕ್ಷಿಯಾಗಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ತಿಳಿಸಿದ್ದಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ತಿಳಿಸಿರುವ ಅವರು, ಆಧುನಿಕ ಸಶಸ್ತ್ರ ಪಡೆಗಳು, ಸ್ಥಳೀಯ ಶಸ್ತ್ರಾಸ್ತ್ರಗಳು, ದಾಖಲೆಯ ರಕ್ಷಣಾ ರಫ್ತುಗಳು ಮತ್ತು ಜಾಗತಿಕವಾಗಿ

ಭಾರತದ ಬಲವರ್ಧನೆಗೆ ಕಾರಣವಾಗಿದೆ ಎಂದು ಹೇಳಿದ್ದಾರೆ. ಇದು ರಕ್ಷಣಾ ವಲಯವನ್ನು ಸ್ವಾವಲಂಬನೆಯತ್ತ ಕೊಂಡೊಯ್ಯಲಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

<><><>

ಸ್ವಿಟ್ಜರ್‌ಲ್ಯಾಂಡ್ ಪ್ರವಾಸದಲ್ಲಿರುವ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್, ಭಾರತ- ಐರೋಪ್ಯ ಮುಕ್ತ ವ್ಯಾಪಾರ ಸಂಘದೊಂದಿಗೆ ಆರ್ಥಿಕ ಪಾಲುದಾರಿಕೆ ಒಪ್ಪಂದದ ಕುರಿತು ಚರ್ಚೆ ನಡೆಸಿದ್ದಾರೆ. ಭಾರತ ಮತ್ತು ಸ್ವಿಟ್ಜರ್‌ಲ್ಯಾಂಡ್ ನಡುವಿನ ವ್ಯಾಪಾರ ಮತ್ತು ಹೂಡಿಕೆಗೆ ಅವಕಾಶಗಳು, ಪಾಲುದಾರಿಕೆಗಳು ಮತ್ತು ಉದಯೋನ್ಮುಖ ಮಾರ್ಗಗಳ ಕುರಿತ ಒಪ್ಪಂದದಿಂದ ಉದ್ಭವಿಸಿದ ವಿಷಯಗಳ ಬಗ್ಗೆ ಚರ್ಚಿಸಿರುವುದಾಗಿ ಪಿಯೂಷ್ ಗೋಯಲ್ ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ. ಈ ಹಿಂದೆ, ಭಾರತ ಮತ್ತು ನಾಲ್ಕು ಐರೋಪ್ಯ ರಾಷ್ಟ್ರಗಳ ನಡುವಿನ ಮುಕ್ತ ವ್ಯಾಪಾರ ಒಪ್ಪಂದ ಸೆಪ್ಟೆಂಬರ್‌ನಿಂದ ಜಾರಿಗೆ ಬರುವ ಸಾಧ್ಯತೆಯಿದೆ ಎಂದು ಸಚಿವರು ಹೇಳಿದ್ದರು. ಮಾಧ್ಯಮದೊಂದಿಗೆ ಮಾತನಾಡಿರುವ ಕೇಂದ್ರ ಸಚಿವರು, ಇಂದು ಭಾರತವನ್ನು ವಿಶ್ವದ ವೇಗವಾಗಿ ಬೆಳೆಯುತ್ತಿರುವ ಅತಿದೊಡ್ಡ ಅರ್ಥವ್ಯವಸ್ಥೆಯಾಗಿ ಮಾತ್ರವಲ್ಲದೆ, ವ್ಯಾಪಾರ ಮಾಡಲು ಅತ್ಯುತ್ತಮ ಸ್ಥಳವಾಗಿಯೂ ಗುರುತಿಸಲಾಗುತ್ತಿದೆ ಎಂದು ಹೇಳಿದರು. ಇಂದು ಭಾರತ ಬಹುಪಾಲು ರಾಷ್ಟ್ರಗಳ ಹೂಡಿಕೆಗೆ ಆದ್ಯತೆಯ ರಾಷ್ಟ್ರವಾಗಿದೆ  ಕಳೆದ ೧೧ ವರ್ಷಗಳಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಭಾರತವನ್ನು ವಿಶ್ವದ ಅಗ್ರ ಐದು ಆರ್ಥಿಕತೆಗಳಲ್ಲಿ ಒಂದಾಗಿ ರೂಪಿಸಿದ್ದಾರೆ ಎಂದು ಸಚಿವ ಪಿಯೂಷ್ ಗೋಯಲ್ ಹೇಳಿದರು.

**ಧ್ವನಿ - ಸಚಿವ ಪಿಯುಷ್ ಗೋಯಲ್ - ೩೪ ಸೆಕೆಂಡ್ಸ್**

ಐರೋಪ್ಯ ಮುಕ್ತ ವ್ಯಾಪಾರ ಸಂಘ-ಇಎಫ್‌ಟಿಎ, ಐಸ್ಲ್ಯಾಂಡ್, ಲಿಚೆನ್‌ಸ್ಟೈನ್, ನಾರ್ವೆ ಮತ್ತು ಸ್ವಿಟ್ಜರ್‌ಲ್ಯಾಂಡ್ ರಾಷ್ಟ್ರಗಳನ್ನು ಒಳಗೊಂಡಿದೆ.

<><><>

ಕೊಚ್ಚಿನ್ ಬಳಿ ಲಿಬೇರಿಯಾದ ಎಂಎಸ್‌ಸಿ ಎಲ್ಸಾ-೩ ಕಂಟೈನರ್ ಹಡಗು ಮುಳುಗಿದ ಬೆನ್ನಲ್ಲೇ ಅದರಿಂದ ಹರಿದು ಬಂದ ಪ್ಲಾಸ್ಟಿಕ್ ನರ್ಡಲ್ ಅಂದರೆ ಪ್ಲಾಸ್ಟಿಕ್ ಕಣಗಳು ತಮಿಳುನಾಡಿನ ಧನುಷ್ಕೋಡಿ ಗ್ರೇಟರ್ ಫ್ಲೆಮಿಂಗೋ ಅಭಯಾರಣ್ಯ ತಲುಪಿವೆ. ಈ ಪ್ಲಾಸ್ಟಿಕ್ ನರ್ಡಲ್ ಗಳು ಸಮುದ್ರ ಪರಿಸರಕ್ಕೆ ಭಾರೀ ಬೆದರಿಕೆ ಒಡ್ಡಿವೆ. ಇವು ಮೀನು ಮೊಟ್ಟೆಗಳಂತೆ ಕಾಣುವ ಪುಟ್ಟ

ಪ್ಲಾಸ್ಟಿಕ್ ಕಣಗಳಾಗಿದ್ದು, ಕಡಲ ಜೀವಿಗಳಿಂದ ನುಂಗಲ್ಪಡುವ ಸಾಧ್ಯತೆ ಇದ್ದು, ಅವುಗಳ ಸಾವಿಗೆ ಕಾರಣವಾಗಬಹುದು. ತಲಾ ೨೫ ಕೆಜಿಯ ಸುಮಾರು ೮೦ ಚೀಲಗಳು ೧೨ ಕಿಮೀ ವ್ಯಾಪ್ತಿಯಲ್ಲಿ ಸಮುದ್ರ ತೀರಕ್ಕೆ ತಲುಪಿವೆ. ಜಿಲ್ಲಾಧಿಕಾರಿ ಸಿಮ್ರಂಜೀತ್ ಸಿಂಗ್ ಕಾಲೋನ್, ೧೫-೩೦ ನರ್ಡಲ್ ಚೀಲಗಳು ಪತ್ತೆಯಾಗಿದ್ದು, ಶುದ್ಧೀಕರಣ ಕಾರ್ಯ ಆರಂಭವಾಗಿದೆ,' ಎಂದು ತಿಳಿಸಿದ್ದಾರೆ. ಮೀನುಗಾರರು ತಮ್ಮ ಜೀವನೋಪಾಯದ ಮೇಲೆ ಪರಿಣಾಮ ಬೀರುವ ಆತಂಕದಲ್ಲಿದ್ದಾರೆ. ಪರಿಸರ ಕಾರ್ಯಕರ್ತರು ತ್ವರಿತ ಕ್ರಮ, ಸರಕು ಪಟ್ಟಿ ಬಹಿರಂಗಗೊಳಿಸಲು ಹಾಗೂ ಪರಿಸರದ ರಕ್ಷಣೆಗೆ ದೀರ್ಘಕಾಲಿಕ ಕ್ರಮಗಳ ಅಗತ್ಯವಿದೆ ಎಂದು ಒತ್ತಾಯಿಸಿದ್ದಾರೆ.

<><><>

ಭಾರತೀಯ ನೌಕಾಪಡೆ, ಕರಾವಳಿ ರಕ್ಷಣಾ ಪಡೆ ನಡೆಸಿದ ಜಂಟಿ ಶೋಧ ಮತ್ತು ರಕ್ಷಣಾ ಕಾರ್ಯಾಚರಣೆಯಲ್ಲಿ, ಸಿಂಗಾಪುರ್ ಧ್ವಜದೊಂದಿಗೆ ಸಂಚರಿಸುತ್ತಿದ್ದ ಎಂವಿ ವಾನ್ ಹೈ ೫೦೩ ಹಡಗಿನ ೨೨ ಸಿಬ್ಬಂದಿಗಳಲ್ಲಿ ೧೮ ಜನರನ್ನು ಸುರಕ್ಷಿತವಾಗಿ ರಕ್ಷಿಸಿದೆ. ಈ ಹಡಗಿನೊಳಗಿನ ಕಂಟೇನರ್‌ನಲ್ಲಿ ಸ್ಫೋಟ ಸಂಭವಿಸಿ ಭಾರೀ ಅಗ್ನಿ ಅವಘಡ ಸಂಭವಿಸಿದ ಕುರಿತು ನಿನ್ನೆ ವರದಿಯಾಗಿತ್ತು. ತಕ್ಷಣವೇ ಐಎನ್‌ಎಸ್ ಸುರತ್ ಹಾಗೂ ಡೋರ್ನಿಯರ್ ವಿಮಾನವನ್ನು ಅಗತ್ಯ ನೆರವು ನೀಡಲು ನಿಯೋಜಿಸಲಾಯಿತು ಎಂದು ನೌಕಾಪಡೆಯು ತಿಳಿಸಿದೆ.

<><><>

ಕಳೆದ ಒಂದು ದಶಕದಲ್ಲಿ ಭಾರತ, ಸರ್ವತೋಮುಖವಾಗಿ ಗಮನಾರ್ಹ ಬದಲಾವಣೆಯನ್ನು ಕಂಡಿದ್ದು, ಸೇವೆ, ಸುಶಾಸನ ಮತ್ತು ಬಡವರ ಕಲ್ಯಾಣದ ತತ್ವದಡಿ ಮುನ್ನಡೆಯುತ್ತಿದೆ. ಕೇಂದ್ರ ಸರ್ಕಾರ ಕಳೆದ ೧೧ ವರ್ಷಗಳಲ್ಲಿ ಕೈಗೊಂಡಿರುವ ಹಲವು ಪ್ರಮುಖ ಪ್ರಯತ್ನಗಳ ಕುರಿತು ಆಕಾಶವಾಣಿ ಸುದ್ದಿ ವಿಭಾಗ ವಿಶೇಷ ವರದಿಯನ್ನು ಪ್ರಸಾರ ಮಾಡುತ್ತಿದೆ. ಈ ಮಾಲಿಕೆಯಲ್ಲಿ ಇಂದು, 'ಪರಿಸರ ಸಂರಕ್ಷಣೆ ಮತ್ತು ಅಭಿವೃದ್ಧಿ' ಕುರಿತ ವರದಿ ಇಲ್ಲಿದೆ.

**ವರದಿ : ಚೇತನ್ (೧ ನಿಮಿಷ ೨೫ ಸೆಕೆಂಡ್ಸ್)**

ಗಂಗೆಯ ಪುನರುಜ್ಜೀವನಕ್ಕಾಗಿ ರೂಪಿಸಲಾಗಿರುವ ನಮಾಮಿ ಗಂಗೆ ಯೋಜನೆ ಜಗತ್ತಿನ ಅತಿದೊಡ್ಡ ನದಿ ಪುನರುಜ್ಜೀವನ ಯೋಜನೆಯಾಗಿದೆ, ಈ ಯೋಜನೆಯಿಂದ ಗಂಗಾ ನದಿ ನೀರಿನ ಗುಣಮಟ್ಟ ಸುಧಾರಿಸಿದ್ದು, ಜೀವವೈವಿಧ್ಯತೆಯನ್ನು ಪ್ರೋತ್ಸಾಹಿಸಲಾಗುತ್ತಿದೆ. ಇದರ ಜೊತೆಗೆ ಪರಿಸರ ಸಂರಕ್ಷಣೆಗೆ ಪೂರಕ ವಾಗಿರುವ ಸ್ವಚ್ಛ ಭಾರತ ಮಿಷನ್ ಮತ್ತು ಗೋಬರ್‌ಧನ್ ಯೋಜನೆ

ಗ್ರಾಮೀಣ ಪ್ರದೇಶಗಳಲ್ಲಿ ಸ್ವಚ್ಛತೆ ಮತ್ತು ಕಸದ ನಿರ್ವಹಣೆಗೆ ಕ್ರಾಂತಿಕಾರಕ ಬದಲಾವಣೆಗಳನ್ನು ತಂದಿವೆ. "ತಾಯಿಯ ಹೆಸರಿನಲ್ಲಿ ಒಂದು ಗಿಡ" ಅಭಿಯಾನದಡಿ ದೇಶಾದ್ಯಂತ ಈವರೆಗೆ ಸುಮಾರು ೧೪೨ ಕೋಟಿ ಗಿಡಗಳನ್ನು ನೆಡಲಾಗಿದ್ದು, ಇಂಗಾಲದ ಅತಿಹೊರಸೂಸುವಿಕೆಯನ್ನು ಹತೋಟಿಯಲ್ಲಿಡಲು ಸಹಕಾರಿಯಾಗಿದೆ. ಭಾರತ ಪ್ರಾಜೆಕ್ಟ್ ಚೀತಾ, ಪ್ರಾಜೆಕ್ಟ್ ಸಿಂಹ, ಮತ್ತು ಪ್ರಾಜೆಕ್ಟ್ ಟೈಗರ್ ಪ್ರಯತ್ನಗಳ ಮೂಲಕ ವನ್ಯಜೀವಿ ಸಂರಕ್ಷಣೆಯಲ್ಲೂ ಯಶಸ್ಸು ಸಾಧಿಸಿದ್ದು, ಪ್ರಸ್ತುತ ದೇಶದಲ್ಲಿ ೩ ಸಾವಿರದ ೬೮೨ ಹುಲಿಗಳಿವೆ, ಇದು ಪ್ರಪಂಚದ ಹುಲಿಗಳ ಸಂಖ್ಯೆಯ ಶೇಕಡ ೭೫ ರಷ್ಟಿದೆ. ಭಾರತ ಏಷ್ಯಾದಲ್ಲೇ ಅತಿಹೆಚ್ಚು ಸಂಖ್ಯೆಯ ಅಂದರೆ, ೯೧ ರಾಂಸರ್ ಸೈಟ್‌ಗಳನ್ನು ಹೊಂದಿದೆ. ಇದು ದೇಶದ ಜೌಗು ಪ್ರದೇಶಗಳನ್ನು ಸಂಕ್ಷಿಸುವ ಸರ್ಕಾರದ ಬದ್ಧತೆಯ ಪ್ರತೀಕವಾಗಿದೆ. ಇದರ ಜೊತೆಗೆ ಭಾರತದ ೧೩ ಕಡಲತೀರಗಳು ಬ್ಲೂ ಫ್ಲ್ಯಾಗ್ ಪ್ರಮಾಣಪತ್ರ ಪಡೆದಿವೆ. ಇನ್ನು ಹವಾಮಾನ ಸದೃಢತೆಗೆ ಪೂರಕವಾಗಿ, ಅಮೃತ ಧರೋಹರ್ ಮತ್ತು ಮಿಶ್ಟಿ ಯೋಜನೆಗಳು, ಜೌಗು ಪ್ರದೇಶಗಳು ಮತ್ತು ಮ್ಯಾಂಗ್ರೋವ್ ಅರಣ್ಯ ಪ್ರದೇಶದ ಸಂರಕ್ಷಣೆಗೆ ಸಹಕರಿಸಿದೆ ಭಾರತದ ಹಸಿರು ಪರಿವರ್ತನೆ ಕೇವಲ ಒಂದು ನೀತಿಯಲ್ಲ ಬದಲಿಗೆ ಒಂದು ಜನಾಂದೋಲನ, ಒಂದು ಜವಾಬ್ದಾರಿ ಹಾಗೂ ಭವಿಷ್ಯ ಪೀಳಿಗೆಗಳಿಗೆ ನೀಡಿವ ಭರವಸೆಯಾಗಿದೆ.

<><><><>

ಕೇಂದ್ರ ಹಣಕಾಸು ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವೆ ನಿರ್ಮಲಾ ಸೀತಾರಾಮನ್ ನವದೆಹಲಿಯಲ್ಲಿ ನಿನ್ನೆ ನಡೆದ ರಾಷ್ಟ್ರೀಯ ಹೂಡಿಕೆ ಮತ್ತು ಮೂಲಸೌಕರ್ಯ ನಿಧಿ - ಎನ್‌ಐಐಎಫ್‌ನ ೬ನೇ ಆಡಳಿತ ಮಂಡಳಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಭೆಯಲ್ಲಿ, ಹಣಕಾಸು ಸಚಿವರು ಮತ್ತು ಇತರ ಆಡಳಿತ ಮಂಡಳಿಯ ಸದಸ್ಯರು ರಾಷ್ಟ್ರೀಯ ಹೂಡಿಕೆ ಮತ್ತು ಮೂಲಸೌಕರ್ಯ ನಿಧಿಯ ಕಾರ್ಯಕ್ಷಮತೆ ಮತ್ತು ಅಸ್ತಿತ್ವದಲ್ಲಿರುವ ನಿಧಿ ಮತ್ತು ಪ್ರಮುಖ ಮಾರ್ಗದರ್ಶನದ ಬಗ್ಗೆ ಚರ್ಚಿಸಿದರು. ರಾಷ್ಟ್ರೀಯ ಹೂಡಿಕೆ ಮತ್ತು ಮೂಲಸೌಕರ್ಯ ನಿಧಿಯಿಂದ ಸಂಗ್ರಹಿಸಬೇಕಾದ ಮುಂದಿನ ಪೀಳಿಗೆಯ ನಿಧಿಗಳ ಸ್ವರೂಪ ಮತ್ತು ಗಾತ್ರ, ಅನ್ವೇಷಿಸಬೇಕಾದ ಬಂಡವಾಳ ಸಂಗ್ರಹಣೆಗೆ ಹೊಸ ಮಾರ್ಗಗಳು ಸೇರಿದಂತೆ, ರಾಷ್ಟ್ರೀಯ ಹೂಡಿಕೆ ಮತ್ತು ಮೂಲಸೌಕರ್ಯ ನಿಧಿಯ ಅಸ್ತಿತ್ವದಲ್ಲಿರುವ ಕಾರ್ಯತಂತ್ರ ಮತ್ತು ಭವಿಷ್ಯದ ದೃಷ್ಟಿಕೋನದ ಬಗ್ಗೆಯೂ ಅವರು ಚರ್ಚಿಸಿದರು.

<><><><>

ಜಮ್ಮು ಮತ್ತು ಕಾಶ್ಮೀರದಲ್ಲಿ, ಬಿಸಿಗಾಳಿ ವಾತಾವರಣ ಹೆಚ್ಚಾಗಿದ್ದು, ಜಮ್ಮು ಪ್ರದೇಶದಲ್ಲಿ ಕಳೆದ ನಾಲ್ಕು ದಿನಗಳಿಂದ ಮುಂದುವರೆದಿದೆ. ಐದು ಜಿಲ್ಲೆಗಳು ೪೦ ಡಿಗ್ರಿಗಿಂತ ಹೆಚ್ಚಿನ ತಾಪಮಾನ ದಾಖಲಿಸಿವೆ. ಸಾಂಬಾದಲ್ಲಿ ಗರಿಷ್ಠ ತಾಪಮಾನ ೪೬.೬ ಡಿಗ್ರಿ ಸೆಲ್ಸಿಯಸ್, ಜಮ್ಮು ನಗರದಲ್ಲಿ ೪೪.೩ ಡಿಗ್ರಿ ಸೆಲ್ಸಿಯಸ್, ಕಟ್ರಾದಲ್ಲಿ ೪೦.೨ ಡಿಗ್ರಿ ಸೆಲ್ಸಿಯಸ್, ರಂಬನ್‌ನಲ್ಲಿ ೪೩.೨ ಡಿಗ್ರಿ ಸೆಲ್ಸಿಯಸ್ ಮತ್ತು ಕಥುವಾದಲ್ಲಿ ೪೩.೨ ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ.

<><><><>

ಕರ್ನಾಟಕದ ಕರಾವಳಿ, ಒಳನಾಡು, ಕೇರಳ, ಮಾಹೆ, ಒಡಿಶಾ, ರಾಯಲಸೀಮಾ, ತಮಿಳುನಾಡು, ಪುದುಚೆರಿ ಮತ್ತು ಕಾರೈಕಲ್ ಸೇರಿದಂತೆ ಈಶಾನ್ಯ ರಾಜ್ಯಗಳ ಕೆಲವೊಂದು ಪ್ರದೇಶಗಳಲ್ಲಿಂದು ಗುಡುಗು ಮಿಂಚು ಸಹಿತ ಭಾರಿ ಮಳೆಯಾಗುವ ಸಂಭವವಿದೆ ಎಂದು ಭಾರತ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಇನ್ನು ದೆಹಲಿ, ಹರಿಯಾಣಾ, ಚಂಡೀಗಢ, ಜಮ್ಮು ಮತ್ತು ಕಾಶ್ಮೀರ, ಲಡಾಖ್, ಮಧ್ಯಪ್ರದೇಶ, ಪಂಜಾಬ್, ರಾಜಸ್ಥಾನ್ ಮತ್ತು ಉತ್ತರ ಪ್ರದೇಶದ ಕೆಲವು ಭಾಗಗಳಲ್ಲಿಂದು ಬಿಸಿಲಿನ ತೀವ್ರತೆ ಹೆಚ್ಚಿದ್ದು, ಬಿಸಿಗಾಳಿ ಪರಿಸ್ಥಿತಿ ಉಂಟಾಗುವ ಸಾಧ್ಯತೆಯಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

<><><><>

ಉಜ್ಬೇಕಿಸ್ತಾನದ ತಾಷ್ಕೆಂಟ್‌ನಲ್ಲಿಂದು ಚಾಲನೆ ದೊರೆಯಲಿರುವ ಕಾವಾ ೧೯-ವರ್ಷದೊಳಗಿನವರ ವಾಲಿಬಾಲ್ ಚಾಂಪಿಯನ್‌ಷಿಪ್ ೨೦೨೫ರಲ್ಲಿ ಭಾಗವಹಿಸಲು ಭಾರತೀಯ ಪುರುಷರ ತಂಡ ಸಜ್ಜಾಗಿದೆ. ತನ್ನ ಮೊದಲ ಪಂದ್ಯದಲ್ಲಿ ಭಾರತ ಇರಾನ್ ವಿರುದ್ಧ ಕಣಕ್ಕಿಳಿಯಲಿದೆ. ನಾಳೆ ಭಾರತೀಯ ತಂಡ ಕಿರ್ಗಿಸ್ಥಾನ್ ವಿರುದ್ಧ ಸೆಣಸಾಟ ನಡೆಸಲಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>